ಅಥಣಿ ತಾಲ್ಲೂಕಿನಲ್ಲಿ ಸೀರೆ, ರವಿಕೆ ಬಟ್ಟೆ ಪಂಚೆ ನೀಡುವ ಯೋಜನೆಯಿಂದ ಅನುಕೂಲ ಪಡೆದವರ ಸಂಖ್ಯೆ.

೧೫೧೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫-೮೬ ರಲ್ಲಿ ಕಡು ಬಡವರಿಗಾಗಿ ಅಥಣಿ ಮತ್ತು ಕಾಗವಾಡ ಕ್ಷೇತ್ರದಲ್ಲಿ ರಿಯಾಯಿತಿ ದರದಲ್ಲಿ ಸೀರೆ ರವಿಕೆ ಬಟ್ಟೆ, ಪಂಚೆ, ನೀಡುವ ಯೋಜನೆಯಿಂದ ಅನುಕೂಲ ಪಡೆದ ಜನರ ಸಂಖ್ಯೆ ಎಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು).—

ಅ) ಲಾಭ ಪಡೆದವರ ಸಂಖ್ಯೆ. — ಗಂಡಸರು : ೨೭,೭೬೯

— ಹೆಂಗಸರು : ೨೬,೯೨೦

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಸಮ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ಕೈಗಾರಿಕಾ ಧೋರಣೆ ಪ್ರಕಾರ, ಜಿಲ್ಲೆಯಲ್ಲಿ ನಡೆಯತಕ್ಕ ಎಲ್ಲಾ ಸಣ್ಣ ಕೈಗಾರಿಕೆಗಳಿಗೂ ಈ ಬಗ್ಗೆ ಅಪಕಾಶ ಮಾಡಿ ಕೊಡುತ್ತಾರೆಯೇ ?

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೆ, ಸಣ್ಣ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶದಲ್ಲಿ ಬೆಳೆಯಬೇಕೆಂಬುದೇ ಸರ್ಕಾರದ ಇಚ್ಛೆ. ಆ ಪ್ರಕಾರ ಸರ್ಕಾರದ ಪಾಲಿಸಿ ಇದೆ. ಕೈವಂಗ್ಗಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಬೇಕೆಂದು ಸರ್ಕಾರ ಉದ್ದೇಶಿಸಿದೆ. ಅದರಂತೆ ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿಗೂ ಸಹ ಪ್ರೋತ್ಸಾಹ ಕೊಡುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಎಷ್ಟು ಜನರಿಗೆ ಈ ರೀತಿಯಂ ಅವಕಾಶವನ್ನು ಕೊಡುತ್ತೀರಿ ?

ಶ್ರೀ ಆರ್. ವಿ. ದೇಶಪಾಂಡೆ.—ಎಷ್ಟು ಜನ ಮುಂದೆ ಬರುತ್ತಾರೆ. ಅವರಿಗೆಲ್ಲರಿಗೂ ಅವಕಾ ಮಾಡಿಕೊಡುತ್ತೇವೆ.

ಗಂಧದ ಸಾಬೂನು ಕಾರ್ಖಾನೆಯಂದರಿಂದ ತಯಾರು ಮಾಡಿದ ಸಾಬೂನಿನ ಮಾರಾಟ

೧೦೩೩. ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ). —ಮಾನ ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯು ಎಷ್ಟು ವರ್ಷದಿಂದ ಕರ್ನಾಟಕ ಸಾಬೂನು ಕಾರ್ಖಾನೆಯ ಸಾಬೂನುಗಳನ್ನು ಮಾರಾಟಕ್ಕೆ ತೆಗೆದುಕೊಂಡಿದೆ ಹಾಗೂ ಒಂದು ವರ್ಷಕ್ಕೆ ಎಷ್ಟು ಕೋಟಿ ರೂ.ಗಳ ಸೋಪನ್ನು ಮಾರಾಟ ಮಾಡಲಾಗುತ್ತಿದೆ ಇದರ ಬಗ್ಗೆ ಒಪ್ಪಂದ ಏನಾದರೂ ಆಗಿದೆಯೇ?

ಆ) ೧೦೦ಕ್ಕೆ ಎಷ್ಟು ಶೇಕಡ ಎಂ.ಎಸ್.ಐ.ಎಲ್. ಸಂಸ್ಥೆಗೆ ಕರ್ನಾಟಕ ಸೋಪ್ ಫ್ಯಾಕ್ಟರಿಯಿಂದ (ಗಂಧದ ಸಾಬೂನು ಕಾರ್ಖಾನೆಯಿಂದ) ಉತ್ಪನ್ನ ಇದೆ ಎಂ.ಎಸ್.ಐ.ಎಲ್ ಸಂಸ್ಥೆಯಲ್ಲಿ ಎಷ್ಟು ಕೋಟಿ ರೂ.ಗಳ ಸಾಬೂನಿನ ದಾಸ್ತಾನು ಇದೆ ಹಾಗಿರಲು ಕಾರಣವೇನು?

ಇ) ಎಂ.ಎಸ್.ಐ.ಎಲ್. ಸಂಸ್ಥೆಯಲ್ಲಿ ಎಷ್ಟು ಜನರಿಗೆ ಬೋನಸ್ ಕೊಡಲಾಗುತ್ತಿದೆ ಹಾಗೂ ಶೇಕಡಾ ಎಷ್ಟು?

ಈ) ಎಂ.ಎಸ್.ಐ.ಎಲ್ ಸಂಸ್ಥೆಯಲ್ಲಿ ಖಾಯಂ ಮತ್ತು ಹಂಗಾಮಿ ಕೆಲಸಗಾರರ ಸಂಖ್ಯೆ ಎಷ್ಟು?

ಉ) ಈ ಸಾಬೂನು ಕಾರ್ಖಾನೆಯಿಂದ ಗಂಧದ ಎಣ್ಣೆಯನ್ನು ಯಾವ ದರಕ್ಕೆ ಎಂ.ಎಸ್. ಐ.ಎಲ್.ಗೆ ಕೊಡುತ್ತಾರೆ ಹಾಗೂ ಈ ಸಂಸ್ಥೆಯವರು ಯಾವ ದರಕ್ಕೆ ಮಾರಲಾಗುವುದು?